# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 45/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಚಂದ್ರಶೇಖರ | ***ಪ್ರಮಾಣ ಮಾಡಿಸಿದ ದಿನಾಂಕಃ*** | |
| **ತಂದೆ/ಗಂಡನ ಹೆಸರು** | ಃ ಶ್ರೀ ಎಂ.ಎಂ.ನಾಗರಾಜು | **07.10.2023** | |
| **ವಯಸ್ಸು** | ಃ **28 ವರ್ಷ** | | |
| **ವೃತ್ತಿ** | ಃ ಆರ್ಟಿಸ್ಟ್ | **ಪ್ರಾ.ಸಾ.** | ಃ **11** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **15** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ–*2* ಎಂ.ಎಂ.ನಾಗರಾಜು ನನ್ನ ತಂದೆ ಇರುತ್ತಾರೆ. ಮೃತ ಪರಶಿವಮೂರ್ತಿ ನನ್ನ ಚಿಕ್ಕಪ್ಪನಿರುತ್ತಾರೆ. ನಾನು ಬೆಂಗಳೂರಿನಲ್ಲಿ ಆರ್ಟಿಸ್ಟ್ ಕೆಲಸದಲ್ಲಿರುವ ಕಾರಣ ಕೆಲಸ ಇಲ್ಲದೇ ಇರುವಾಗ ಮಾತ್ರ ಮೈಸೂರಿಗೆ ಬರುತ್ತೇನೆ. ನನ್ನ ಚಿಕ್ಕಪ್ಪ ಪರಶಿವಮೂರ್ತಿ ನನ್ನೊಂದಿಗೆ ಮತ್ತು ನನ್ನ ತಂದೆಯೊಂದಿಗೆ ಚೆನ್ನಾಗಿದ್ದಾರೆ ಅವರಿಗೆ ಏನಾದರೂ ಬೇಕಾದಾಗ ನನಗೆ ಫೋನ್ ಮಾಡುತ್ತಿದ್ದರು ಆಗ ನಾನು ಮೈಸೂರಿನಲ್ಲಿದ್ದರೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದೆ. ನನ್ನ ಚಿಕ್ಕಪ್ಪ ನನ್ನ ತಂದೆಯೊಂದಿಗೆ ಚೆನ್ನಾಗಿದ್ದರೆ ಅವರೊಂದಿಗೆ ಆಗಾಗ ಮಾತನಾಡುತ್ತಿದ್ದರು. ನನ್ನ ಚಿಕ್ಕಪ್ಪ ಪರಶಿವಮೂರ್ತಿಯವರು ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತಿಯಾಗಿದ್ದರು ಆದರೆ ಯಾವ ವರ್ಷ ಎಂದು ನೆನಪಿಲ್ಲ. ದಿಃ*20.09.2020* ರಂದು ರಾತ್ರಿ ವೇಳೆಯಲ್ಲಿ ನನ್ನ ತಂದೆ ನನಗೆ ಫೋನ್ ಮಾಡಿ ನನ್ನ ಚಿಕ್ಕಪ್ಪನನ್ನು ಯಾರೋ ಕೊಲೆ ಮಾಡಿದ್ದರೆ ಎಂದು ಹೇಳಿದ್ದರು. ಆ ಕೂಡಲೇ ನಾನು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ತುಂಬಾ ಜನ ಸೇರಿದ್ದರು ಆದರೆ ಆ ಕಾಲಕ್ಕೆ ನನ್ನನ್ನು ಒಳಗಡೆ ಬಿಟ್ಟಿರಲಿಲ್ಲ. ಆ ಕಾಲಕ್ಕೆ ನನ್ನ ಚಿಕ್ಕಪ್ಪ ಇವರು ಶವ ಆ ಮನೆಯ ಹಾಲ್ ನಲ್ಲಿ ಬೆತ್ತದ ಚೇರ್ ನ

ಪಕ್ಕದಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿತ್ತು. ನನ್ನ ಚಿಕ್ಕಪ್ಪ ಪರಶಿವಮೂರ್ತಿಯವರು ಆ ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು.

*2.* ಕೊಲೆಯಾಗುವುದಕ್ಕಿಂತ *2* ವಾರಗಳ ಮುಂಚೆ ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆ ಸೋಮೇಶ್ವರಪುರದ ಬಳಿ ಇರುವ ನನ್ನ ಚಿಕ್ಕಪ್ಪನ ಜಾಗಕ್ಕೆ ಹೋಗಿದ್ದರು. ಅಲ್ಲಿಂದ ಅವರು ಬೈಕ್ ನಲ್ಲಿ ವಾಪಸ್ಸು ಬರುವಾಗ ಒಂದು ಕೋಳಿ ಫಾರಂ ಬಳಿ ಟಾಟಾ ಎಸ್ ವಾಹನ ಅವರಿಗೆ ಹೊಡೆದುಕೊಂಡು ಹೋಗಿತ್ತು. ಆ ಕಾಲಕ್ಕೆ ನನ್ನ ತಂದೆಗೆ ತರಚಿದ ಗಾಯ ಆಗಿತ್ತು. ನನ್ನ ಚಿಕ್ಕಪ್ಪನಿಗೆ ಬಲಗೈನ ಬೆರಳುಗಳಿಗೆ ಗಾಯಗಳಾಗಿದ್ದವು. ಆದಾದ ನಂತರ ಅವರ ಕೊಲೆಯಾಗುವ ಒಂದು ವಾರದ ಮುಂಚೆ ನನ್ನ ಚಿಕ್ಕಪ್ಪ ನನ್ನನ್ನು ಒಂದು ಸೈಟ್ ನ ರಿಜಿಸ್ಟ್ರೇಷನ್ ಮಾಡಿಸಬೇಕು ಎಂದು ನನ್ನನ್ನು ಕರೆದಿದ್ದು ಆಗ ನಾನು ನನ್ನ ಬೈಕ್ ನಲ್ಲಿ ಅವರನ್ನು ಕರೆದುಕೊಂಡು ಹೋಗಿದ್ದೆ. ಆ ಕಾಲಕ್ಕೆ ಅಲ್ಲಿ ರಷ್ ಇದುದ್ದರಿಂದ ಕೆಲಸವಾಗಲಿಲ್ಲ ನಾವು ವಾಪಸ್ಸು ಬಂದಿದ್ದೇವು.

*3.* ತನಿಖೆ ನಡೆದ ಬಳಿಕ ನನ್ನ ಚಿಕ್ಕಪ್ಪ ನಡೆಸುತ್ತಿದ್ದ ವಿಶ್ವಚೇತನ ವಿದ್ಯಾಸಂಸ್ದೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದ ವಿಶ್ವನಾಥ ಮತ್ತು ಮಡಿವಾಳ ಶಿಕ್ಷಣ ಸಂಸ್ದೆಯ ಮುಖ್ಯಸ್ಥರು ಕೊಲೆ ಮಾಡಿಸಿದ್ದಾರೆ ಎಂದು ಗೊತ್ತಾಗಿತ್ತು. ಅವರು ಸಂಸ್ಥೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ಕೊಲೆ ಮಾಡಿಸಿದ್ದಾರೆ ಎಂದು ಗೊತ್ತಾಗಿತ್ತು. ಈಗ ನಾನು ನೋಡುತ್ತಿರುವ *4* ನೇ ಆರೋಪಿತ ವಿಶ್ವನಾಥ ಇದ್ದು, *3* ನೇ ಆರೋಪಿತ ಮಡಿವಾಳ ಶಿಕ್ಷಣ ಸಂಸ್ದೆಯ ಮುಖ್ಯಸ್ಥರು ಇದ್ದು ಅವರ ಹೆಸರು ಸಿದ್ದರಾಜು ಇರಬಹುದು. ಕೊರ್ಟ್ ಮುಂದೆ ಇರುವ *5* ನೇ ಆರೋಪಿತರು ಪರಶಿವ ಇದ್ದು ಅವರು ಸಹ ವಿಶ್ವಚೇತನ ವಿದ್ಯಾಸಂಸ್ದೆಯಲ್ಲಿ ಕೆಲಸ ಮಾಡುತ್ತಾರೆ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

*4.* ಕೊಲೆಯಾಗಿದ್ದ ದಿನ ಕೊಲೆ ಯಾರು ಮಾಡಿದ್ದಾರೆ ಎನ್ನುವ ವಿಷಯ ಬಿಟ್ಟು ಬೇರೆ ಉಳಿದ ವಿಷಯಗಳನ್ನು ಹೇಳಿದ್ದೆ. ಆ ಕಾಲಕ್ಕೆ ಅಪಘಾತದ ಬಗ್ಗೆ ಹೇಳಿರಲಿಲ್ಲ. ನನ್ನ ಚಿಕ್ಕಪ್ಪನ ಕೊಲೆಯಾದ ದಿನ ನಾನು ಮೈಸೂರಿನಲ್ಲಿದ್ದೆ. ಕೊಲೆಯಾಗುವ *3-4* ದಿನಗಳ ಹಿಂದೆ ನಾನು ನನ್ನ ಚಿಕ್ಕಪ್ಪನನ್ನು ನೋಡಿದ್ದೆ. ಆ ಕಾಲಕ್ಕೆ ಅವರಿಗೆ ಅಪಘಾತ ಆಗಿದೆ ಎಂದು ಗೊತ್ತಾಗಿತ್ತು. ಅಪಘಾತ ಆಗಿದ್ದ ದಿನ ನಾನು ಅಪಘಾತ ಸ್ಥಳಕ್ಕೆ ಹೋಗಿರಲಿಲ್ಲ. ಅಪಘಾತದ ದಿನ ನನ್ನ ತಂದೆ ಮತ್ತು ಚಿಕ್ಕಪ್ಪನನ್ನು ಯಾರು ಕರೆದುಕೊಂಡು ಬಂದಿದ್ದರು ಮತ್ತು ಅವರ ಬೈಕ್ ಅನ್ನು ಯಾರು ತಂದಿದ್ದರು ಎಂದು ನೆನಪಿಲ್ಲ. ಅಪಘಾತದ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿರಲಿಲ್ಲ. ಅಪಘಾತದ ಬಳಿಕ ನನ್ನ ತಂದೆ ಮತ್ತು ಚಿಕ್ಕಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಅಪಘಾತದ ಬಗ್ಗೆ ನನ್ನ ತಂದೆ ಹೇಳಿದ್ದರಿಂದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ನನ್ನೊಂದಿಗೆ ಮಾಮುಲಿನಂತೆ ನಗುನಗುತ್ತಾ ಮಾತನಾಡುತ್ತಿದ್ದರು ಮಾಮುಲಿನಂತೆ ಕೆಲಸ ಮಾಡಿಕೊಂಡ ಇದ್ದರು ಎಂದು ಹೇಳಿದ್ದೇನೆ. ಆ ಕಾಲಕ್ಕೆ ಅವರು ನನ್ನ ಆಶ್ರಯ ಬೇಕು ಎಂದು ಕೇಳಿರಲಿಲ್ಲ. ವಿಶ್ವಚೇತನ ವಿದ್ಯಾಸಂಸ್ಥೆಯ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ನಿಜ. ನನ್ನ ಚಿಕ್ಕಪ್ಪನವರ ಕೊಲೆಯನ್ನು ಯಾರು ಯಾರು ಮಾಡಿದ್ದಾರೆ ಎಂದು ಪೊಲೀಸ್ ನವರು ಹೇಳಿದ ಮೇಲೆ ನನಗೆ ಗೊತ್ತಾಗಿದೆ ಎಂದರೆ ನಿಜ.

*5.* ನನ್ನ ಚಿಕ್ಕಪ್ಪ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ನಿಜ. ಅವರು ಬಡ್ಡಿ ವ್ಯವಹಾರವನ್ನು ಸಹ ಮಾಡುತ್ತಿದ್ದರು ಎಂದರೆ ಸಣ್ಣಪುಟ್ಟ ಬಡ್ಡಿ ವ್ಯವಹಾರ ಮಾಡುತ್ತಿದ್ದರು. ಅವರಿಗೆ ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ಬಡ್ಡಿ ವ್ಯವಹಾರದ ಕಾಲಕ್ಕೆ ಬಹಳಷ್ಟು ವಿರೋದಿಗಳು

ಇದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಮನೆ ಒಳಗಡೆ ಇದ್ದಾಗ ಗೇಟ್ ಮತ್ತು ಮನೆಯ ಮುಂಭಾಗಕ್ಕೆ ಬೀಗ ಹಾಕುತ್ತಿದ್ದರು ಎಂದರೆ ನಿಜ. ನನ್ನ ಚಿಕ್ಕಪ್ಪನ ಕೊಲೆಯಾದ ಬಳಿಕ ಮೊದಲಿಗೆ ಯಾರು ಆ ಮನೆ ಬಳಿ ಹೋಗಿದ್ದರು ಎಂದು ಗೊತ್ತಿಲ್ಲ. ಪೋಲೀಸರ ಚಿತಾವಣೆ ಮೇರೆಗೆ ಮತ್ತು ನನ್ನ ತಂದೆಯ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ *3* ಮತ್ತು *4* ನೇ ಆರೋಪಿತರ ಪರ ಶ್ರೀ ಸಿ.ಪಿ ವಕೀಲರಿಂದಃ</u>**

***6.*** ನಾನು ಬೇರೆ ಕಲಾವಿದರಿಗೆ ಕಂಠದಾನ ಮಾಡುವುದು ಮತ್ತು ನಾಟಕಗಳಲ್ಲಿ ಮತ್ತು ದಾರವಾಹಿಗಳಲ್ಲಿ ಅಭಿನಯಿಸುವುದು, ಸ್ಟೇಜ್ ಶೋಗಳಲ್ಲಿ ಅಭಿನಯಿಸುವುದು ಮಾಡುತ್ತೇನೆ. *2018* ರ ಕೊನೆಯ ಭಾಗದಿಂದ ನಾನು ಆ ರೀತಿ ಕಲಾವಿದನಾಗಿ ಕೆಲಸ ಮಾಡುತ್ತಿದ್ದೇನೆ. ಕೋವಿಡ್ ಲಾಕ್ ಡಾನ್ ಕೊನೆಗೊಂಡ ಬಳಿಕ ಯಾವಾಗ ನಾನು ವೃತ್ತಿ ಪ್ರಾರಂಭಿಸಿದ್ದೆ ಎಂದು ನಿಖರವಾಗಿ ನೆನಪಿಲ್ಲ. ಸೊಮೇಶ್ವರಪುರದ ಬಳಿ ಇರುವ ಜಮೀನಿಗೆ ನಾನು ಯಾವತ್ತು ಹೋಗಿಲ್ಲ. ಕೋಳಿ ಫಾರಂ ಬಳಿ ಅಪಘಾತ ಆದ ವಿಷಯ ಅಪಘಾತ ಆದ ಬಳಿಕ ಒಂದು ದಿನ ನಾನು ಮೈಸೂರಿನಲ್ಲಿ ಗೆಳೆಯರೊಂದಿಗೆ ಅಂತರ್ಮುಖಿ ಎನ್ನುವ ಶಾರ್ಟ್ ಫಿಲಂ ಶೂಟಿಂಗ್ ಮುಗಿಸಿಕೊಂಡು ಬಂದಾಗ ಸಂಜೆ ಗೊತ್ತಾಗಿತ್ತು. ಲಾಕ್ ಡಾನ್ ಸಮಯದಲ್ಲಿ ಯಾವುದೇ ಚಿತ್ರೀಕರಣ ಮಾಡಲು ಅನುಮತಿ ಕೊಡುತ್ತಿರಲಿಲ್ಲ ಎಂದರೆ ನಿಜ. ಆ ಕಾಲಕ್ಕೆ ಹೊಟ್ಟೆಗೆ ಗಾಯವಾಗಿತ್ತು ಆದರೆ ಎಡಬದಿಗೆ ಆಗಿತ್ತೊ ಅಥವಾ ಬಲಬದಿಗೆ ಆಗಿತ್ತೊ ಎಂದು ನಿಖರವಾಗಿ ನೆನಪಿಲ್ಲ. ಆ ಕಾಲಕ್ಕೆ ನಾನು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ಆ ಅಪಘಾತದ ಕಾಲಕ್ಕೆ ನನ್ನ ಚಿಕ್ಕಪ್ಪನಿಗೆ ಬಲಗೈನ ಬೆರಳುಗಳಿಗೆ ಗಾಯವಾಗಿ ಬ್ಯಾಂಡೇಜ್

ಹಾಕಿಕೊಂಡಿದ್ದರು. ಅಪಘಾತ ಆಗಿ ಎಷ್ಟು ದಿನಕ್ಕೆ ಮತ್ತು ನನ್ನ ಚಿಕ್ಕಪ್ಪ ಮರಣಹೊಂದುವ ಎಷ್ಟು ದಿನಗಳ ಮೊದಲು ಅವರಿಗೆ ಗಾಯವಾಗಿದ್ದ ಬಗ್ಗೆ ನನಗೆ ಗೊತ್ತಾಗಿತ್ತು ಎಂದು ಈಗ ನೆನಪಿಲ್ಲ.

7. ನಾನು ನನ್ನ ಚಿಕ್ಕಪ್ಪನೊಂದಿಗೆ ಸಬ್ ಅರ್ಬನ್ ಬಸ್ ಸ್ಟ್ಯಾಂಡ್ ಬಳಿ ಇರುವ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿದ್ದೆ. ಆ ಕಾಲಕ್ಕೆ ನನ್ನ ಚಿಕ್ಕಪ್ಪನ ಕೈಗೆ ಬ್ಯಾಂಡೇಜ್ ಹಾಕಿತ್ತೊ ಇಲ್ಲವೊ ನೆನಪಿಲ್ಲ. ಆ ಕಾಲಕ್ಕೆ ನಾನು ಅವರ ಮನೆಗೆ ಹೋಗದೇ ಇದುದ್ದರಿಂದ ಅವರ ವಾಹನಕ್ಕೆ ಏನೇನು ಡ್ಯಾಮೇಜ್ ಆಗಿತ್ತು ಎಂದು ನೋಡಿರಲಿಲ್ಲ. ನನ್ನ ತಂದೆ ನನ್ನ ಚಿಕ್ಕಪ್ಪ ಮತ್ತು ಅವರ ಸಹೋದರಿಯರ ವಿರುದ್ಧ ಆಸ್ತಿ ಪಾಲಿನ ವಿಷಯವಾಗಿ ಕೇಸ್ ಹಾಕಿದ್ದ ಬಗ್ಗೆ ಗೊತ್ತಿದೆ. ಈಗ ನನ್ನ ಚಿಕ್ಕಪ್ಪ ಮರಣಹೊಂದಿದ ಬಳಿಕ ಈಗ ಆ ಕೇಸ್ ನಲ್ಲಿ ಏನಾಗಿದೆ ಎಂದು ಗೊತ್ತಿಲ್ಲ. ವಿಶ್ವಚೇತನ ವಿದ್ಯಾಸಂಸ್ಥೆಗೆ ಈಗಿನ ಕಾರ್ಯದರ್ಶಿ ಯಾರು ಎಂದು ಗೊತ್ತಿಲ್ಲ. ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡುವ ಪ್ರಪೋಸಲ್ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆ ಆಸ್ತಿ ವ್ಯಾಜ್ಯ ಇದುದ್ದರಿಂದ ಎರಡು ಕುಟುಂಬಗಳ ನಡುವೆ ಭಿನ್ನಾಭಿಪ್ರಾಯ ಇದುದ್ದರಿಂದ ನಾನು ನನ್ನ ಚಿಕ್ಕಪ್ಪನ ಮನೆಗೆ ಹೊಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಕೊಲೆಯಾದ ದಿನ ರಾತ್ರಿ 8.30-9 ಗಂಟೆ ವೇಳೆಗೆ ನನಗೆ ಆ ಬಗ್ಗೆ ಗೊತ್ತಾಗಿತ್ತು. ಆ ಬಗ್ಗೆ ಗೊತ್ತಾದ ಬಳಿಕ ನಾನು ಅಂದಾಜು 9.30 ಗಂಟೆಗೆ ಆ ಸ್ಥಳಕ್ಕೆ ಹೋಗಿದ್ದೆ ಆದರೆ ನಿಖರವಾದ ಸಮಯ ಗೊತ್ತಿಲ್ಲ. ಆ ಕಾಲಕ್ಕೆ ಬೇಸಿಕ್ ಡಿಟೇಲ್ಸ್ ಮಾತ್ರ ಕೇಳಿದ್ದರು ಆದರೆ ಹೆಚ್ಚಿನ ವಿಚಾರಣೆ ಮಾಡಿರಲಿಲ್ಲ. ಆದಾದ ನಂತರ ಹಲವಾರು ಬಾರಿ ನನ್ನ ತಂದೆಯೊಂದಿಗೆ ಪೋ.ಠಾಣೆಗೆ ಹೊಗಿದ್ದೇನೆ. ನಾನು ಹಲವಾರು ಬಾರಿ ನನ್ನ ತಂದೆಯೊಂದಿಗೆ ಪೋ.ಠಾಣೆಗೆ ಹೋಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನವೂ ನನ್ನೊಂದಿಗೆ ವಿಶ್ವಚೇತನ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುವ ಗುರುರಾಜ ರಾವ್,

ಬಸವಲಿಂಗಸ್ವಾಮಿ ಮತ್ತು ಬಾಲಚಂದ್ರ ಹೆಗ್ಡೆ ಕೊರ್ಟ್ ಗೆ ಬಂದಿದ್ದಾರೆ ಎಂದರೆ ನಿಜ. ನನ್ನ ತಂದೆ ಹೇಳಿದ್ದರಿಂದ ಅವರು ನನ್ನನ್ನು ಕರೆದುಕೊಂಡು ಕೋರ್ಟ್ ಗೆ ಬಂದಿದ್ದಾರೆ ಎಂದರೆ ಗೊತ್ತಿಲ್ಲ.

**2 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು 2 ನೇ ಆರೋಪಿತರು 1 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲುನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**5 ನೇ ಆರೋಪಿತರ ಪರ ವಕೀಲರು 1, 3 ಮತ್ತು 4 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲುನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು